# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 32/2020 ಪಿ.ಡಬ್ಲ್ಯೂಃ 1

ಸಿಡಬ್ಲೂಃ 1

ಸಾಕ್ಷಿದಾರರ ಹೆಸರು : ಶಂಕರಪ್ಪ

ತಂದೆಯ ಹೆಸರು : ಹನುಮಂತರಾಯ ಪೂಜಾರಿ

ವಯಸ್ಸು : 27 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಹಿರೂರು , ಬಿಜಾಪುರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 23-01-2023

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ಚಾಸಾ.2 ಮತ್ತು 3 ರವರ ಪರಿಚಯ ನನಗೆ ಮೊದಲು ಇರುವುದಿಲ್ಲಾ , ನಾನು ಬಾಡಿಗೆಗೆ ಹೋದಾಗ ನನಗೆ ಅವರ ಪರಿಚಯವಾಯಿತು. ನನಗೆ ಚಾಸಾ.6 ಮತ್ತು 8 ರವರ ಪರಿಚಯ ನನಗೆ ಮೊದಲು ಇರುವುದಿಲ್ಲಾ , ನಾನು ಕೆಲಸಕ್ಕೆ ಹೋದ ನಂತರ ಅವರ ಪರಿಚಯವಾಯಿತು. ನನಗೆ ಮೃತ ರವಿ ಲಮಾಣಿ ಅವರ ಪರಿಚಯ ನನಗೆ ಮೊದಲು ಇರುವುದಿಲ್ಲಾ , ನಾನು ಕೆಲಸಕ್ಕೆ ಹೋದ ನಂತರ ಅವರ ಪರಿಚಯವಾಯಿತು.

2. ನಾನು ಜನವರಿ ಕೊನೆಯ ವಾರದಲ್ಲಿ ಕಾರವಾರಕ್ಕೆ ಗಾಡಿ ಬಾಡಿಗೆ ಸಲುವಾಗಿ ಬಂದಿದ್ದೆ. ನಾನು ಕಾರವಾರದಲ್ಲಿ ರಾಮನಾಥ ದೇವಸ್ಥಾನದ ಒಳಗಡೆ ಉಳಿದುಕೊಂಡಿದ್ದೆ. ನಾನು ಮತ್ತು ಚಾಸಾ.8 ರವರು ಒಟ್ಟಿಗೆ ಇದ್ದೆವು.

3. ದಿನಾಂಕಃ 03.02.2019 ರಂದು ನಾನು , ಮೃತ ರವಿ ಲಮಾಣಿ ಮತ್ತು ಚಾಸಾ.6 ಮಾರುಕಟ್ಟೆಗೆ ಬಸ್ಸಿನಲ್ಲಿ ಬಂದಿದ್ದೆವು. ನಾವು ತಿರುಗಿ ಬಸ್ಸಿನಲ್ಲಿ ಹೋದೆವು. ನಾವು ರಾಮನಾಥ ದೇವಸ್ಥಾನದ ಸ್ವಲ್ಪ ಹಿಂದೆ ಇಳಿದುಕೊಂಡೆವು. ನಾವು ಇಳಿದುಕೊಂಡ ನಂತರ ಕಚ್ಚಾರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದೆವು. ಆಗ ಮಧ್ಯ ಇದ್ದ ವ್ಯಕ್ತಿ ಮೃತ ರವಿ ಲಮಾಣಿ ಇವರಿಗೆ ಹಿಂದಿನಿಂದ ಎಕ್ಟಿವಾ ಹೊಂಡಾ ಸ್ಕೂಟರ ನಂಬರ ಜಿ ಎ 08 1243 ವೇಗವಾಗಿ ಬಂದು ಹೊಡೆಯಿತು. ಆಗ ಮೃತ ರವಿ ಲಮಾಣಿ ಮತ್ತು ಸ್ಕೂಟರ ಚಾಲಕ ಇಬ್ಬರೂ ಕೆಳಗೆ ಬಿದ್ದರು. ಸದರಿ ಸ್ಕೂಟರ ನಲ್ಲಿ ಇಬ್ಬರು ವ್ಯಕ್ತಿಗಳು ಹೋಗುತ್ತಿದ್ದರು.

4. ಆಗ ನಾವು ಬಿದ್ದ ವ್ಯಕ್ತಿಗಳನ್ನು ಎಬ್ಬಿಸಿದೆವು. ಮೃತ ರವಿ ಲಮಾಣಿ ಅವರಿಗೆ ರಸ್ತೆಯ ಮೇಲೆ ಬಿದ್ದಿದ್ದರಿಂದ ಮೂಗಿನಲ್ಲಿ ರಕ್ತ ಬರುತ್ತಿತ್ತು . ಆಗ ಸಮಯ ಸಂಜೆ 6.30 ಆಗಿತ್ತು. ಸ್ಕೂಟರ ಚಾಲಕನ ಹೆಸರು ನಿತೇಶ ದಿಲೀಪ ಕೋಲಕರ ಎಂದು ತಿಳಿಯಿತು. ಹಾಗೆ ಆದ ನಂತರ ನಾವು ಚಾಸಾ.8 ರವರಿಗೆ ಕರೆ ಮಾಡಿ ತಿತಳಿಸಿದೆವು. ನಾವು ಮೃತ ರವಿ ಲಮಾಣಿ ಅವರನ್ನು ಜಿಲ್ಲಾ ಆಸ್ಪತ್ರೆ ಕಾರವಾರಕ್ಕೆ ಕರೆದುಕೊಂಡು ಹೋದೆವು. ಆಗ ವೈದ್ಯರು ಸುಮಾರು ಎರಡು ಗಂಟೆ ಬಿಟ್ಟು ತಿಳಿಸುವುದಾಗಿ ಹೇಳಿದರು. ನನಗೆ ಸುಮಾರು 2 ಗಂಟೆಯ ನಂತರ ಚಾಸಾ.8 ರವರು ರವಿ ಲಮಾಣಿ ಅವರು ಮೃತರಾಗಿದ್ದಾರೆ ಎಂದು ತಿಳಿಸಿದರು. ಈ ಘಟನೆ ಕುರಿತು ನಾನು ಪೋಲೀಸರಿಗೆ ಆರೋಪಿಯ ವಿರುದ್ಧ ದೂರನ್ನು ದಾಖಲಿಸಿದೆನು. ಆಗ ಸಮಯ ರಾತ್ರಿ 8.30 ಆಗಿತ್ತು. ನಾನು ಈಗ ಆ ದೂರು ನೋಡುತ್ತಿದ್ದು , ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

5. ದಿನಾಂಕಃ 04.02.2019 ರಂದು ಪೋಲೀಸರು ಘಟನಾ ಸ್ಥಳಕ್ಕೆ ಬಂದರು. ಘಟನಾ ಸ್ಥಳವನ್ನು ಪೋಲೀಸರಿಗೆ ನಾನು ತೋರಿಸಿದ್ದೇನೆ. ಪೋಲೀಸರು ಘಟನಾ ಸ್ಥಳದಲ್ಲಿ ಬೆಳಿಗ್ಗೆ 11 – 12 ಗಂಟೆಯವರೆಗೆ ಸ್ಥಳ ಪಂಚನಾಮೆಯನ್ನು ಚಾಸಾ.2 ಮತ್ತು 3 ರವರ ಸಮಕ್ಷಮ ಮಾಡಿದರು. ನಾನು ಈಗ ಆ ಪಂಚನಾಮೆ ನೋಡುತ್ತಿದ್ದು , ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ಪೋಲೀರು ಘಟನಾ ಸ್ಥಳದಲ್ಲಿ ಹಾಥ ನಕಾಶೆಯನ್ನು ಬರೆದರು. ನಾನು ಈಗ ಹಾಥ ನಕಾಶೆಯನ್ನು ನೋಡುತ್ತಿದ್ದು , ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಪೋಲೀಸರು ಘಟನಾ ಸ್ಥಳದಲ್ಲಿ ಫೋಟೋಗಳನ್ನು ತೆಗೆದರು. ಪೋಲೀಸರು ಆ ಸಮಯಕ್ಕೆ ತೆಗೆದ ಫೋಟೋಗಳನ್ನು ನಾನು ಈಗ ನೋಡುತ್ತಿದ್ದು , ಅವುಗಳನ್ನು ಗುರುತಿಸುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ಪೋಲೀಸರು ನ್ಯಾಯಾಲಯಕ್ಕೆ ಹಾಜರು ಮಾಡಿದ ಫೋಟೋದಲ್ಲಿ ನಾನು ಮೃತ ವ್ಯಕ್ತಿ ರವಿ ಲಮಾಣಿ ಅವರನ್ನು ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿ ಮತ್ತು ಘಟನಾ ದಿನ ಮೃತ ವ್ಯಕ್ತಿ ರವಿ ಲಮಾಣಿ ಅವರಿಗೆ ವಾಹನದಿಂದ ಗುದ್ದಿದ ವ್ಯಕ್ತಿ ಒಬ್ಬರೇ ಅಗಿರುತ್ತಾರೆ.

**ಪಾಟೀ ಸವಾಲುಃ ಶ್ರೀ  ಎಸ್ ಪಿ ಜಿ   ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**